# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ, ಗುಬ್ಬಿ

## ದಿನಾಂಕಃ- 09.01.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು<br>ವರ್ಷ<br>ಕೆಲಸ<br>ವಾಸ್ತವ್ಯ | ಪ್ರೇಮ ಕೋಂ ಸಿದ್ದಲಿಂಗಮರಿ<br>35 ವರ್ಷ<br>ಗೃಹಿಣಿ<br>ಬೆಣಚಿಗೆರೆ |
| | ಸತ್ಯ ಪ್ರತಿಜ್ಞೆಯ ಮೇರೆಗೆ |

## ಮುಂದುವರಿದ ಪಾಟೀ ಸವಾಲುಃ- ಪ್ರತಿವಾದಿಗಳ ಪರ ವಕೀಲರಾದ ಶ್ರೀ.ಡಿ.ಎಂ. ರವರಿಂದ

7 ನೇ ಪ್ರತಿವಾದಿಗೆ ಮಾರಾಟ ಮಾಡಿರುವ ದಾವಾಸ್ವತ್ತನ್ನು ಹೊರತುಪಡಿಸಿ ನಾವು ಇತರೆ ಒಟ್ಟು ಕುಟುಂಬದ ಸ್ವತ್ತುಗಳ ಮೇಲೆ ಈ ದಾವೆ ಹಾಕಿಲ್ಲ ಎಂದರೆ ಸರಿ. ಬೆಣಚಿಗೆರೆ ಗ್ರಾಮದ ಸ.ನಂಃ316 , ಹೊಸ ಸಃನಂಃ 316/3 , 1 ಎಕರೆ 39 ವರೆ ಗುಂಟೆ ಜಮೀನು ನಮ್ಮ ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿ. ಸದರಿ ಜಮೀನು ನನ್ನ ತಂದೆ ಮೃತಪಡುವ ಮುಂಚೆ ಅವರ ಹೆಸರಿನಲ್ಲಿ ಖಾತೆ ಪಹಣಿ ಇತ್ತು ಎಂದರೆ ಸರಿ. ನನ್ನ ತಂದೆ ಮೃತಪಟ್ಟ ನಂತರ ಸದರಿ ಜಮೀನಿನ ಖಾತೆಯು ಪವತಿವಾರಸು ಮೇಲೆ ನನ್ನ ತಾಯಿಯ ಹೆಸರಿಗೆ ಬದಲಾವಣೆ ಆಯಿತು ಎಂದರೆ ಸರಿ. ಮೇಲೆ ಹೇಳಿದ ಹೊಸ ಸಃನಂಃ 316/3 , 1 ಎಕರೆ 39 ವರೆ ಗುಂಟೆ ಜಮೀನನ್ನು ಈ ದಾವೆಯಲ್ಲಿ ನಾನು ಸೇರಿಸಿಲ್ಲ ಎಂದರೆ ಸರಿ.

2. ನಾನು ದಿಃ28-08-2023 ರ ಮುಖ್ಯವಿಚಾರಣೆಯ ಪ್ರಮಾಣಪತ್ರದಲ್ಲಿ ನಾನು ಹಾಗೂ ಪ್ರತಿವಾದಿ 2 ರಿಂದ 6 ರವರು 1 ನೇ ಪ್ರತಿವಾದಿಯ ಹೆಸರಿಗೆ ಸ.ನಂಃ 316/3 1 ಎಕರೆ 39 ಗುಂಟೆ ಜಮೀನನ್ನು ನೊಂದಾಯಿತ ದಾನಪತ್ರವನ್ನು ಬರೆದುಕೊಟ್ಟಿರುವುದಾಗಿ ಹೇಳಿದ್ದು ಸದರಿ ದಾನಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಹೌದು ಹಾಜರಪಡಿಸಿದ್ದೇನೆ ಎನ್ನುತ್ತಾರೆ. ನಾನು ನೊಂದಾಯಿತ ದಾನಪತ್ರವನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ದಾನಪತ್ರ ಬರೆದುಕೊಡುವ ಕಾಲಕ್ಕೆ ನಿಮ್ಮ ಹೆಸರಲ್ಲಿ ಖಾತೆ ಪಹಣಿ ಇತ್ತಾ ಎಂದರೆ ಸಾಕ್ಷಿಯು ಖಾತೆ ಪಹಣಿ ನನ್ನ ತಾಯಿಯ ಹೆಸರಿನಲ್ಲಿ ಇತ್ತು ಎನ್ನುತ್ತಾರೆ. ನಾನು ಉದ್ದೇಶಪೂರ್ವಕವಾಗಿಯೇ ಸ.ನಂಃ316/3 ಹಾಗೂ ನಮ್ಮ ವಾಸದ ಮನೆಯನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ.

3. ನನ್ನ ತಾತ ಸಂಗಪ್ಪನಿಗೆ ಒಟ್ಟು 4 ಜನ ಮಕ್ಕಳು ಎಂದರೆ ಸರಿ. ಅವರೆಂದರೆ ದೊಡ್ಡಬಸಪ್ಪ , ಗಂಗಮ್ಮ , ಸಂಗಪ್ಪ , ಶಿವಮ್ಮ ಎಂದರೆ ಸರಿ. ನನ್ನ ತಂದೆ ದೊಡ್ಡಬಸಪ್ಪನ ಜಮೀನು ಸ.ನಂಃ13/2 ಹಾಗೂ ನನ್ನ ಚಿಕ್ಕಪ್ಪಸಂಗಪ್ಪನ ಜಮೀನು ಸ.ನಂಃ 13/5 ಅಕ್ಕಪಕ್ಕ ಇತ್ತು ಎಂದರೆ ಸರಿ. ನನ್ನ ತಂದೆಯ ಹೆಸರಿನಲ್ಲಿ ಇದ್ದ ಸ.ನಂಃ13/2 ರಲ್ಲಿ ನಮ್ಮ ಚಿಕ್ಕಪ್ಪ ಸಂಗಪ್ಪ ಅನುಭವದಲ್ಲಿ ಇದ್ದರು ಎಂದರೆ ಸರಿ. ಅದೇ ರೀತಿ ನನ್ನ ಚಿಕ್ಕಪ್ಪ ಸಂಗಪ್ಪನ ಹೆಸರಿನಲ್ಲಿದ್ದ ಸ.ನಂಃ13/5, 1 ಎಕರೆ 19 ಗುಂಟೆ ಜಮೀನಿನಲ್ಲಿ ನನ್ನ ತಂದೆ ಸ್ವಾಧೀನಾನುಭವದಲ್ಲಿ ಇದ್ದರು ಎಂದರೆ ಸರಿ. ದಿಃ 22-05-2015 ರಲ್ಲಿ ನನ್ನ ತಂದೆ ಹಾಗೂ ನನ್ನ ಚಿಕ್ಕಪ್ಪ ಮೇಲೆ ಹೇಳಿದ ಜಮೀನುಗಳನ್ನು ಅದಲುಬದಲು ಮಾಡಿಕೊಂಡರು ಎಂದರೆ ಸರಿ. ನಾನು, ನನ್ನ ತಾಯಿ ಹಾಗೂ ನನ್ನ ಸಹೋದರಿಯರೆಲ್ಲಾ ಸೇರಿ ಸ.ನಂಃ13/2 , 2 ಎಕರೆ 1 ಗುಂಟೆ ಜಮೀನನ್ನು ನನ್ನ ಚಿಕ್ಕಪ್ಪನ ಮಗನಾದ ಬಿ.ಎಸ್.ನಾಗರಾಜುರವರಿಗೆ ಕ್ರಯಪತ್ರದ ಮುಖಾಂತರ ಬರೆದುಕೊಟ್ಟಿರುತ್ತೇವೆ ಎಂದರೆ ಸರಿ.

ಅದೇ ದಿನ ಸ.ನಂಃ 13/5 , 1 ಎಕರೆ 19 ಗುಂಟೆ ಜಮೀನನ್ನು ನನ್ನ ಚಿಕ್ಕಪ್ಪ ಹಾಗೂ ಆತನ ಮಕ್ಕಳು ನನ್ನ ಹೆಸರಿಗೆ ಬರೆದುಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಸದರಿ ಜಮೀನನ್ನು 7 ಭಾಗ ಮಾಡಿದರು , ನಾನು ದುಡ್ಡು ಕೊಟ್ಟು ಸದರಿ ಜಮೀನನ್ನು ಖರೀದಿ ಮಾಡಿರುತ್ತೇನೆ. ಸದರಿ ಜಮೀನನನ್ನು ನಾವು 6 ಜನ ಹೆಣ್ಣು ಮಕ್ಕಳಿಗೂ ಹಾಗೂ ನನ್ನ ತಾಯಿಗೂ ಸೇರಿ 7 ಭಾಗ ಮಾಡಿದರು. ನಾನು ತಲಾ 3 ಲಕ್ಷ ರೂ ಹಣ ಕೊಟ್ಟು ನನ್ನ ಹೆಸರಿನಲ್ಲಿ ಖರೀದಿ ಮಾಡಿರುತ್ತೇನೆ. ನಾನು ನನ್ನ ತಾಯಿ ಹಾಗೂ ತಂಗಿಯರಿಗೆ 3 ಲಕ್ಷ ಹಣ ಪಾವತಿ ಮಾಡಿದ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ. ಸದರಿ ನಾಗರಾಜು ಹಾಗೂ ನಮ್ಮ ಕುಟುಂಬದವರು ಮೇಲೆ ಹೇಳಿದ ಜಮೀನುಗಳ ಬಾಬ್ತು ಅದಲು ಬದಲು ಪತ್ರ ಮಾಡಿಕೊಂಡಿದ್ದೇವೆ ಹೊರತು ನಾನು ಖರೀದಿ ಮಾಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 7 ರವರಿಗೆ ತೊಂದರೆ ಕೊಡುವ ಉದ್ದೇಶದಿಂದ ನಾನು ಮೇಲೆ ಹೇಳಿದ ಸ.ನಂಃ ಜಮೀನನ್ನು ಹಾಗೂ ವಾಸದ ಮನೆಯನ್ನು ಸೇರಿಸದೇ ಈದಾವೆಯನ್ನು ಹಾಕಿದ್ದೇನೆ ಎಂದರೆ ಸಾಕ್ಷಿಯು ವಾಸದ ಮನೆ ಹಾಗೂ ಸ.ನಂಃ13/5 ಹಾಗೂ ಸ.ನಂಃ316/3 ಜಮೀನು ಭಾಗ ಆಗಿರುತ್ತದೆ ಹಾಗಾಗಿ ಅದನ್ನು ಸೇರಿಸಿಲ್ಲ, ದಾವಾಸ್ವತ್ತು ಮಾತ್ರ ಭಾಗ ಆಗಿರುವುದಿಲ್ಲ ಹಾಗಾಗಿ ಈ ದಾವೆ ಹಾಕಿದ್ದೇನೆ ಎನ್ನುತ್ತಾರೆ. ದಾವಾಸ್ವತ್ತನ್ನು ಪ್ರತಿವಾದಿ 7 ರವರಿಗೆ ಮಾರಾಟ ಮಾಡಲು ನಾನು ಮೌಖಿಕವಾಗಿ ಒಪ್ಪಿಗೆ ಕೊಟ್ಟಿದ್ದರೂ ಸಹ ನಾನು ಅವರಿಗೆ ತೊಂದರೆ ಕೊಡಲೆಂದು ಈ ದಾವೆ ಹಾಕಿದ್ದೇನೆ ಎಂದರೆ ಸರಿಯಲ್ಲ.

ಮುಂದುವರಿದ ಪಾಟೀ ಸವಾಲುಃ- ಪ್ರತಿವಾದಿ **1** ರಿಂದ **5** ರವರ ಗಳ ಪರ ವಕೀಲರಾದ ಶ್ರೀ.ಹೆಚ್.ಎನ್.ಡಿ. ರವರು ಪ್ರತಿವಾದಿ 7 ರವರ ಪರ ವಕೀಲರು ಮಾಡಿದ ಪಾಟೀಸವಾಲನ್ನೇ ಅಳವಡಿಸಿಕೊಳ್ಳವುದಾಗಿ ಹೇಳಿರುತ್ತಾರೆ.

ಶ್ರೀ.ಡಿ.ಎಂ. ರವರಿಂದ

7 ನೇ ಪ್ರತಿವಾದಿಗೆ ಮಾರಾಟ ಮಾಡಿರುವ ದಾವಾಸ್ವತ್ತನ್ನು ಹೊರತುಪಡಿಸಿ ನಾವು ಇತರೆ ಒಟ್ಟು ಕುಟುಂಬದ ಸ್ವತ್ತುಗಳ ಮೇಲೆ ಈ ದಾವೆ ಹಾಕಿಲ್ಲ ಎಂದರೆ ಸರಿ. ಬೆಣಚಿಗೆರೆ ಗ್ರಾಮದ ಸ.ನಂಃ316 , ಹೊಸ ಸಃನಂಃ 316/3 , 1 ಎಕರೆ 39 ವರೆ ಗುಂಟೆ ಜಮೀನು ನಮ್ಮ ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿ.

2. ಸದರಿ ಜಮೀನು ನನ್ನ ತಂದೆ ಮೃತಪಡುವ ಮುಂಚೆ ಅವರ ಹೆಸರಿನಲ್ಲಿ ಖಾತೆ ಪಹಣಿ ಇತ್ತು ಎಂದರೆ ಸರಿ. ನನ್ನ ತಂದೆ ಮೃತಪಟ್ಟ ನಂತರ ಸದರಿ ಜಮೀನಿನ ಖಾತೆಯು ಪವತಿವಾರಸು ಮೇಲೆ ನನ್ನ ತಾಯಿಯ ಹೆಸರಿಗೆ ಬದಲಾವಣೆ ಆಯಿತು ಎಂದರೆ ಸರಿ. ಮೇಲೆ ಹೇಳಿದ ಹೊಸ ಸಃನಂಃ 316/3 , 1 ಎಕರೆ 39 ವರೆ ಗುಂಟೆ ಜಮೀನನ್ನು ಈ ದಾವೆಯಲ್ಲಿ ನಾನು ಸೇರಿಸಿಲ್ಲ ಎಂದರೆ ಸರಿ.

3. ನಾನು ದಿಃ28-08-2023 ರ ಮುಖ್ಯವಿಚಾರಣೆಯ ಪ್ರಮಾಣಪತ್ರದಲ್ಲಿ ನಾನು ಹಾಗೂ ಪ್ರತಿವಾದಿ 2 ರಿಂದ 6 ರವರು 1 ನೇ ಪ್ರತಿವಾದಿಯ ಹೆಸರಿಗೆ ಸ.ನಂಃ 316/3 1 ಎಕರೆ 39 ಗುಂಟೆ ಜಮೀನನ್ನು ನೊಂದಾಯಿತ ದಾನಪತ್ರವನ್ನು ಬರೆದುಕೊಟ್ಟಿರುವುದಾಗಿ ಹೇಳಿದ್ದು ಸದರಿ ದಾನಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಹೌದು ಹಾಜರಪಡಿಸಿದ್ದೇನೆ ಎನ್ನುತ್ತಾರೆ. ನಾನು ನೊಂದಾಯಿತ ದಾನಪತ್ರವನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ದಾನಪತ್ರ ಬರೆದುಕೊಡುವ ಕಾಲಕ್ಕೆ ನಿಮ್ಮ ಹೆಸರಲ್ಲಿ ಖಾತೆ ಪಹಣಿ ಇತ್ತಾ ಎಂದರೆ ಸಾಕ್ಷಿಯು ಖಾತೆ ಪಹಣಿ ನನ್ನ ತಾಯಿಯ ಹೆಸರಿನಲ್ಲಿ ಇತ್ತು ಎನ್ನುತ್ತಾರೆ. ನಾನು ಉದ್ದೇಶಪೂರ್ವಕವಾಗಿಯೇ ಸ.ನಂಃ316/3 ಹಾಗೂ ನಮ್ಮ ವಾಸದ ಮನೆಯನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ.

4. ನನ್ನ ತಾತ ಸಂಗಪ್ಪನಿಗೆ ಒಟ್ಟು 4 ಜನ ಮಕ್ಕಳು ಎಂದರೆ ಸರಿ. ಅವರೆಂದರೆ ದೊಡ್ಡಬಸಪ್ಪ , ಗಂಗಮ್ಮ , ಸಂಗಪ್ಪ , ಶಿವಮ್ಮ ಎಂದರೆ ಸರಿ. ನನ್ನ ತಂದೆ ದೊಡ್ಡಬಸಪ್ಪನ ಜಮೀನು ಸ.ನಂಃ13/2 ಹಾಗೂ ನನ್ನ ಚಿಕ್ಕಪ್ಪಸಂಗಪ್ಪನ ಜಮೀನು ಸ.ನಂಃ 13/5 ಅಕ್ಕಪಕ್ಕ ಇತ್ತು ಎಂದರೆ ಸರಿ. ನನ್ನ ತಂದೆಯ ಹೆಸರಿನಲ್ಲಿ ಇದ್ದ ಸ.ನಂಃ13/2 ರಲ್ಲಿ ನಮ್ಮ ಚಿಕ್ಕಪ್ಪ ಸಂಗಪ್ಪ ಅನುಭವದಲ್ಲಿ ಇದ್ದರು ಎಂದರೆ ಸರಿ. ಅದೇ ರೀತಿ ನನ್ನ ಚಿಕ್ಕಪ್ಪ ಸಂಗಪ್ಪನ ಹೆಸರಿನಲ್ಲಿದ್ದ ಸ.ನಂಃ13/5, 1 ಎಕರೆ 19 ಗುಂಟೆ ಜಮೀನಿನಲ್ಲಿ ನನ್ನ ತಂದೆ ಸ್ವಾಧೀನಾನುಭವದಲ್ಲಿ ಇದ್ದರು ಎಂದರೆ ಸರಿ.

5. ದಿಃ 22-05-2015 ರಲ್ಲಿ ನನ್ನ ತಂದೆ ಹಾಗೂ ನನ್ನ ಚಿಕ್ಕಪ್ಪ ಮೇಲೆ ಹೇಳಿದ ಜಮೀನುಗಳನ್ನು ಅದಲುಬದಲು ಮಾಡಿಕೊಂಡರು ಎಂದರೆ ಸರಿ. ನಾನು, ನನ್ನ ತಾಯಿ ಹಾಗೂ ನನ್ನ ಸಹೋದರಿಯರೆಲ್ಲಾ ಸೇರಿ ಸ.ನಂಃ13/2 , 2 ಎಕರೆ 1 ಗುಂಟೆ ಜಮೀನನ್ನು ನನ್ನ ಚಿಕ್ಕಪ್ಪನ ಮಗನಾದ ಬಿ.ಎಸ್.ನಾಗರಾಜುರವರಿಗೆ ಕ್ರಯಪತ್ರದ ಮುಖಾಂತರ ಬರೆದುಕೊಟ್ಟಿರುತ್ತೇವೆ ಎಂದರೆ ಸರಿ. ಅದೇ ದಿನ ಸ.ನಂಃ 13/5 , 1 ಎಕರೆ 19 ಗುಂಟೆ ಜಮೀನನ್ನು ನನ್ನ ಚಿಕ್ಕಪ್ಪ ಹಾಗೂ ಆತನ ಮಕ್ಕಳು ನನ್ನ ಹೆಸರಿಗೆ ಬರೆದುಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಸದರಿ ಜಮೀನನ್ನು 7 ಭಾಗ ಮಾಡಿದರು , ನಾನು ದುಡ್ಡು ಕೊಟ್ಟು ಸದರಿ ಜಮೀನನ್ನು ಖರೀದಿ ಮಾಡಿರುತ್ತೇನೆ. ಸದರಿ ಜಮೀನನನ್ನು ನಾವು 6 ಜನ ಹೆಣ್ಣು ಮಕ್ಕಳಿಗೂ ಹಾಗೂ ನನ್ನ ತಾಯಿಗೂ ಸೇರಿ 7 ಭಾಗ ಮಾಡಿದರು. ನಾನು ತಲಾ 3 ಲಕ್ಷ ರೂ ಹಣ ಕೊಟ್ಟು ನನ್ನ ಹೆಸರಿನಲ್ಲಿ ಖರೀದಿ ಮಾಡಿರುತ್ತೇನೆ. ನಾನು ನನ್ನ ತಾಯಿ ಹಾಗೂ ತಂಗಿಯರಿಗೆ 3 ಲಕ್ಷ ಹಣ ಪಾವತಿ ಮಾಡಿದ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ. ಸದರಿ ನಾಗರಾಜು ಹಾಗೂ ನಮ್ಮ ಕುಟುಂಬದವರು ಮೇಲೆ ಹೇಳಿದ ಜಮೀನುಗಳ ಬಾಬ್ತು ಅದಲು ಬದಲು ಪತ್ರ ಮಾಡಿಕೊಂಡಿದ್ದೇವೆ ಹೊರತು ನಾನು ಖರೀದಿ ಮಾಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 7 ರವರಿಗೆ ತೊಂದರೆ ಕೊಡುವ ಉದ್ದೇಶದಿಂದ ನಾನು ಮೇಲೆ ಹೇಳಿದ ಸ.ನಂಃ ಜಮೀನನ್ನು ಹಾಗೂ ವಾಸದ ಮನೆಯನ್ನು ಸೇರಿಸದೇ ಈದಾವೆಯನ್ನು ಹಾಕಿದ್ದೇನೆ ಎಂದರೆ ಸಾಕ್ಷಿಯು ವಾಸದ ಮನೆ ಹಾಗೂ ಸ.ನಂಃ13/5 ಹಾಗೂ ಸ.ನಂಃ316/3 ಜಮೀನು ಭಾಗ ಆಗಿರುತ್ತದೆ ಹಾಗಾಗಿ ಅದನ್ನು ಸೇರಿಸಿಲ್ಲ, ದಾವಾಸ್ವತ್ತು ಮಾತ್ರ ಭಾಗ ಆಗಿರುವುದಿಲ್ಲ ಹಾಗಾಗಿ ಈ ದಾವೆ ಹಾಕಿದ್ದೇನೆ ಎನ್ನುತ್ತಾರೆ. ದಾವಾಸ್ವತ್ತನ್ನು ಪ್ರತಿವಾದಿ 7 ರವರಿಗೆ ಮಾರಾಟ ಮಾಡಲು ನಾನು ಮೌಖಿಕವಾಗಿ ಒಪ್ಪಿಗೆ ಕೊಟ್ಟಿದ್ದರೂ ಸಹ ನಾನು ಅವರಿಗೆ ತೊಂದರೆ ಕೊಡಲೆಂದು ಈ ದಾವೆ ಹಾಕಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ .**

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಗುಬ್ಬಿ.